# ಬ್ಯಾಂಕ್ ಠೇವಣಿ ಎಷ್ಟು ಸುರಕ್ಷಿತ?

ಬ್ಯಾಂಕ್‌ಗಳು ಕೆಟ್ಟ ಸಂಗತಿಗಳಿಗಾಗಿ ಸುದ್ದಿಯಲ್ಲಿವೆ. ಬ್ಯಾಂಕಿನ ವಹಿವಾಟು ಸ್ವರೂಪದ ಬಗ್ಗೆ ತಿಳಿದುಕೊಳ್ಳುವುದು ಗ್ರಾಹಕರಾಗಿ ನಿಮ್ಮ ಕರ್ತವ್ಯ.

**ಎಮ್.ಎಸ್.ಬದಾಮಿ, ರಬಕವಿ**




ಪ್ರತಿ ದಿನ ಟಿ.ವಿ ಮತ್ತು ಪತ್ರಿಕೆಗಳಲ್ಲಿ ಬ್ಯಾಂಕ್‌ಗಳಿಗೆ ವಂಚಿಸಿ ವಿದೇಶಕ್ಕೆ ಓಡಿಹೋದವರ ಬಗ್ಗೆಯೇ ಸುದ್ದಿ. ಬ್ಯಾಂಕ್‌ಗಳಿಂದ ಪಡೆದ ದೊಡ್ಡ ಮೊತ್ತದ ಸಾಲವನ್ನು ಕೆಲವರು ಮರಳಿಸುವುದೇ ಇಲ್ಲ. ವಿಜಯ ಮಲ್ಯ ಮತ್ತು ನೀರವ ಮೋದಿಯಂಥವರು ದೊಡ್ಡ ಪ್ರಮಾಣದಲ್ಲಿ ಬ್ಯಾಂಕ್‌ನಿಂದ ಸಾಲ ಪಡೆದು ಅದನ್ನು ಮರಳಿಸದೆ ವಿದೇಶಗಳಲ್ಲಿ ವಿಲಾಸಿ ಜೀವನ ನಡೆಸುತ್ತಿದ್ದಾರೆ. ಅವರು ಬ್ಯಾಂಕ್‌ನ ಹಣವನ್ನು ಲಪಟಾಯಿಸಿದರೆ ನಮಗೇನೂ ಸಂಬಂಧವಿಲ್ಲ ಎಂದು ನೀವು ಕೈ ಕಟ್ಟಿ ಕುಳಿತುಕೊಳ್ಳುವಂತಿಲ್ಲ. ಬ್ಯಾಂಕ್ ಅವರಿಗೆ ಕೊಟ್ಟದ್ದು ಯಾರ ಹಣ? ನಿಶ್ಚಿತವಾಗಿಯೂ ಅದು ಠೇವಣಿದಾರರ ಹಣ. ಹಾಗಾದರೆ ಠೇವಣಿದಾರನು ತನ್ನ ಹಣವನ್ನು ಮರಳಿ ಪಡೆಯಲು ಬ್ಯಾಂಕ್‌ಗೆ ಹೋದರೆ ಬ್ಯಾಂಕರ್ ಎಲ್ಲಿಂದ ಹಣ ಕೊಟ್ಟಾನು?

ಇದು ಒಂದು ಬ್ಯಾಂಕ್‌ನ ಕಥೆಯಲ್ಲ. ಎಲ್ಲ ಬ್ಯಾಂಕ್‌ಗಳಿಗೂ ಆವರಿಸಿದ ಸಾಂಕ್ರಾಮಿಕ ರೋಗ. ಹೀಗಾದರೆ ಬ್ಯಾಂಕ್‌ಗಳನ್ನೇ ನಂಬಿ ಕುಳಿತ ಠೇವಣಿದಾರನ ಪರಿಸ್ಥಿತಿ ಹೇಗೆ? ಸರಕಾರವು ಠೇವಣಿದಾರನಿಗೆ ಭದ್ರತೆ ಕೊಡಲಾರದೆ? ಜನರು ಬ್ಯಾಂಕ್‌ಗಳನ್ನು ತೊರೆದರೆ ಅವು ಕೃಷಿ ಮತ್ತು ಕೈಗಾರಿಕೆಗಳಿಗೆ ಹಣ ಒದಗಿಸುವುದು ಸಾಧ್ಯವೆ? ದೇಶದ ಆರ್ಥಿಕ ಪ್ರಗತಿಗೆ ಇದು ಪೂರಕವಾದೀತೆ? ಇವೆಲ್ಲವೂ ಈಗ ನಮ್ಮ ಮುಂದಿರುವ ಪ್ರಶ್ನೆಗಳು.

ಬ್ಯಾಂಕ್‌ನ ವ್ಯವಹಾರವು ಇತರ ವ್ಯವಹಾರಗಳಂತಲ್ಲ. ತನ್ನ ಸ್ವಂತ ಬಂಡವಾಳಕ್ಕಿಂತಲೂ ಸಾಲದ ಬಂಡವಾಳದ (ಠೇವಣಿಗಳ) ಮೇಲೆಯೆ ವ್ಯವಹಾರ ಮಾಡುತ್ತದೆ. ಇಲ್ಲಿ ಸ್ವಂತ ಬಂಡವಾಳಕ್ಕಿಂತಲೂ ಸಾಲದ ಬಂಡವಾಳವೇ ಬಲು ದೊಡ್ಡದು. ಅಂದರೆ ಜನರು ಕೊಟ್ಟ ಸಣ್ಣ ಸಣ್ಣ ಮೊತ್ತದ ಠೇವಣಿಗಳ ಮೇಲೆಯೆ ಬ್ಯಾಂಕ್ ತನ್ನ ಕಾರ್ಯ ನಿರ್ವಹಿಸುತ್ತದೆ. ಹೀಗಿರುವಾಗ, ಕೊಟ್ಟ ಸಾಲವು ಬಡ್ಡಿಸಹಿತ ನಿಯಮಿತವಾಗಿ ಮರಳಿ ಬರುವಂತಿರಬೇಕು. ಹಾಗಾದರೆ ಮಾತ್ರ ಠೇವಣಿದಾರರು ಕೇಳಿದಾಗ ಅವರ ಹಣವನ್ನು ಮರಳಿಸಬಹುದು.

ಆದರೆ ಸಾಲದ ಹಣವೆ ಮರಳಿ ಬಾರದಿದ್ದರೆ? ಮರಳಿ ಬಾರದ ಸಾಲದ ಮೊತ್ತವು ಅಲ್ಪ ಪ್ರಮಾಣದ್ದಾದರೆ ಅಷ್ಟು ತೊಂದರೆದಾಯಕ ಆಗಲಿಕ್ಕಿಲ್ಲ. ಸಾವಿರಾರು ಕೋಟಿ ರೂಪಾಯಿ ಸಾಲದ ಹಣವನ್ನು ಮರಳಿಸದಿದ್ದರೆ ಬ್ಯಾಂಕ್‌ನ ದುಡಿಯುವ ಬಂಡವಾಳದ ಗತಿಯೇನು? ಈಗ ಎಲ್ಲ ಬ್ಯಾಂಕ್‌ಗಳಿಗೆ ಸೇರಿ ಸುಮಾರು ಎಂಟು ಲಕ್ಷ ಕೋಟಿ ರೂಪಾಯಿಯಷ್ಟು ಸಾಲದ ಹಣವು ಮರಳಿ ಬಾರದ ಸ್ಥಿತಿಯಲ್ಲಿದೆ. ಬ್ಯಾಂಕ್‌ಗಳ ಲೆಕ್ಕದಲ್ಲಿ ಇದು ಅನುತ್ಪಾದಕ ಆಸ್ತಿ (ಎನ್‌ಪಿಎ– ನಾನ್ ಪರ್ಫಾರ್ಮಿಂಗ್ ಅಸೆಟ್). ಸರಳವಾಗಿ ಹೇಳುವುದಿದ್ದರೆ ಮರಳಿ ಬಾರದ ಸಾಲ. ಹೆಚ್ಚುತ್ತಿರುವ ಮರಳಿ ಬಾರದ ಸಾಲ, ಕ್ಷೀಣಿಸುತ್ತಿರುವ ಆಸ್ತಿ ಮತ್ತು ಕುಸಿಯುತ್ತಿರುವ ಬಂಡವಾಳ ಪ್ರಮಾಣ ಮುಂತಾದವು ಬ್ಯಾಂಕ್‌ಗಳಿಗೆ ಸಂಬಂಧಿಸಿದ ಪ್ರತಿದಿನದ ಸುದ್ದಿಗಳಾಗಿವೆ. ಇವು ಬ್ಯಾಂಕ್‌ಗಳ ಹಣಕಾಸು ಆರೋಗ್ಯದ ಮೇಲೆ ಪ್ರತಿಕೂಲಕರ ಪರಿಣಾಮ ಬೀರದಿರಲು ಹೇಗೆ ಸಾಧ್ಯ?

90 ದಿನಗಳಿಗಿಂತಲೂ ಹೆಚ್ಚಿನ ಅವಧಿಯವರೆಗೆ ಗ್ರಾಹಕನು ಸಾಲವನ್ನು ಮರಳಿಸದಿದ್ದರೆ ಅದು ಕೆಟ್ಟ ಸಾಲ. ಇಂಥ ಕೆಟ್ಟ ಸಾಲದ ಪರಿಣಾಮ